# ‘ಡಾ. ಜಿನದತ್ತ ದೇಸಾಯಿಯವರ ಕಾವ್ಯದಲ್ಲಿ ಸಮಾಜಮುಖಿ ಚಿಂತನ’
# ಉಪನ್ಯಾಸ ಕಾರ್ಯಕ್ರಮ




ಧಾರವಾಡ : ಕೌಟುಂಬಿಕ ಜೀವನದಲ್ಲಿ ಇಂದು ಹಲವಾರು ವಿಷಯಗಳಲ್ಲಿ ಗ್ರಾಸವಾಗುತ್ತಾ ಒಡಕುಗಳಾಗುವ ಸಂದರ್ಭದಲ್ಲಿ ಸಹೋದರ ಭಾವನೆ & ಕೂಡು ಕುಟುಂಬದಿಂದ ಮಾದರಿಯಾದವರು ಡಾ. ಜಿನದತ್ತ ದೇಸಾಯಿಯವರು. ದೇಸಾಯಿಯವರ ಇಡಿಯಾದ ಕಾವ್ಯದ ಅಧ್ಯಯನ ಮಾಡಿದರೆ ಅದರಿಂದ ತಿಳಿಯುವುದೆನೆಂದರೆ, ಅವರ ಶೈಲಿಯ ವಸ್ತು ಇಡೀ ಸಮಾಜದ ವ್ಯವಸ್ಥೆಯನ್ನು ಬದಲಿಸುವ ಹಿನ್ನೆಲೆಯಲ್ಲಿವೆ ಎಂದು ಹಿರಿಯ ಸಾಹಿತಿಗಳಾದ ಡಾ. ಬಾಳಣ್ಣ ಶೀಗೀಹಳ್ಳಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ ೩–೪–೨೦೧೯ ರಂದು ಕವಿ ಡಾ. ಜಿನದತ್ತ ದೇಸಾಯಿ ದತ್ತಿ ಅಂಗವಾಗಿ ಆಯೋಜಿಸಿದ್ದ ‘ಡಾ. ಜಿನದತ್ತ ದೇಸಾಯಿಯವರ ಕಾವ್ಯದಲ್ಲಿ ಸಮಾಜಮುಖಿ ಚಿಂತನ’ ವಿಷಯ ಕುರಿತು ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಡಾ. ಜಿನದತ್ತ ದೇಸಾಯಿಯವರು ಎಲ್ಲಾ ವಿಷಯಗಳನ್ನು ಒಳಗೊಂಡ ಒಂದು ಸಾಗರ. ಆ ಸಾಗರದಲ್ಲಿ ಅವರು ತಮ್ಮ ಪರಿಶುದ್ಧವಾದ, ಪಾರದರ್ಶಕವಾದ, ವಸ್ತುನಿಷ್ಠವಾದ ಚಿಂತನೆಯಿಂದ ಅವರು ಸದಾ ಸಮಾಜಮುಖಿಯಾಗಿದ್ದಾರೆ. ಕಾಲದ ಕೂಸು ಕವಿ. ಕಾಲದ ಸಂದರ್ಭದ ಹಿನ್ನೆಲೆಯಲ್ಲಿ ಕವಿಗಳನ್ನು ಪರಿಗಣಿಸಬೇಕಾಗುತ್ತದೆ. ಬದುಕಿನ ಆಯಾಮಗಳನ್ನು ಕಾವ್ಯದಲ್ಲಿ ಕಟ್ಟಿಕೊಳ್ಳಬೇಕಾಗುತ್ತದೆ. ಬಲಾಢ್ಯವಾದ ನಿರ್ಣಯಗಳು, ಸಮಾಜವನ್ನು ಹಾಳು ಮಾಡುತ್ತಿವೆ. ಅದನ್ನು ದುರ್ಬಲವಾದ ನಿರ್ಣಯಗಳಿಂದ ಗೆಲ್ಲುವುದು ಬಹಳ ಕಷ್ಟ. ಆ ಕೆಲಸವನ್ನು ಬಹಳ ವಸ್ತು ನಿಷ್ಠತೆಯಿಂದ ಡಾ. ಜಿನದತ್ತ ದೇಸಾಯಿಯವರು ತಮ್ಮ ಕಾವ್ಯದ ಮೂಲಕ ಗೆದ್ದು ತೋರಿಸಿದ್ದಾರೆ ಎಂದು ಹೇಳಿದರು.

ಆಯಾ ಕಾಲಘಟ್ಟದ ಪ್ರಕಾರಗಳನ್ನು ಒಳಗೊಂಡು ಬರೆದಿರುವುದು ವಿಶೇಷ. ಹಾಗಾಗಿ ಅವರು ಬಳಸಿದ ಭಾಷೆಯು ಸಾಮಾನ್ಯ ಜನರಿಗೆ ಅರ್ಥವಾಗುತ್ತಿದ್ದ ಕಾರಣ ಎಲ್ಲರನ್ನು ಎಬ್ಬಿಸುವ ಕೆಲಸ ಮಾಡಿದವರು ಡಾ. ಜಿನದತ್ತ ದೇಸಾಯಿಯವರು ಎಂದರು.

ವಿಶೇಷ ಆಮಂತ್ರಿತರಾಗಿ ಆಗಮಿಸಿದ ಡಾ. ಟಿ.ಆರ್. ಜೋಡಟ್ಟಿ ಮಾತನಾಡಿ, ದೇಸಾಯಿಯವರ ಒಡನಾಟದ ವಿಡಂಬನೆಗಳನ್ನು ಹಂಚಿಕೊಂಡರು ಅಲ್ಲದೇ ಅವರ ಕಾವ್ಯದ ವಸ್ತುಗಳನ್ನು ನೆನಪಿಸಿಕೊಂಡರು.

ಅಧ್ಯಕ್ಷತೆಯನ್ನು ವಹಿಸಿದ್ದ ವಿಶ್ರಾಂತ ಪ್ರಾಚಾರ್ಯರಾದ ಶಿರಸಿಯ ಡಾ. ಧರಣೇಂದ್ರ ಕುರಕುರಿ ಮಾತನಾಡಿ, ಪ್ರಕೃತಿಯ ವಸ್ತು ವಿಷಯವನ್ನು ನೋವಿನಿಂದ ನೋಡುತ್ತಾರೆ, ಹರ್ಷದಿಂದ ನೋಡುತ್ತಾರೆ, ಎಲ್ಲದರ ಸಮ್ಮಿಳಿತದಲ್ಲಿ ನೋಡುವುದರಿಂದಲೇ ಅವರು ಭಿನ್ನವಾಗಿ ನಿಲ್ಲುತ್ತಾರೆ ಎಂದರು.

ಇದೇ ಸಂದರ್ಭದಲ್ಲಿ ದೇಸಾಯಿಯವರ ಪ್ರಥಮ ಕವನ ಸಂಕಲನ ‘ನೀಲಾಂಜನ’ ಕೃತಿಯನ್ನು ಹಿಂದಿಗೆ ಅನುವಾದಿಸಿದ ಡಾ. ಟಿ.ಆರ್. ಜೋಡಟ್ಟಿಯವರ ಕೃತಿಯನ್ನು ಬಿಡುಗಡೆಗೊಳಿಸಲಾಯಿತು.

ವೇದಿಕೆ ಮೇಲೆ ದತ್ತಿ ದಾನಿಗಳಾದ ವರ್ಧಮಾನ ದೇಸಾಯಿ, ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಮತ್ತು ದತ್ತಿ ಕೇಂದ್ರ ಬಿಂದು ಕವಿ. ಡಾ. ಜಿನದತ್ತ ದೇಸಾಯಿಯವರು ಇದ್ದರು. ಡಾ. ಜಿನದತ್ತ ದೇಸಾಯಿಯವರನ್ನು ಅವರ ಶಿಷ್ಯರು, ಅಭಿಮಾನಿ ಬಳಗ ಮತ್ತು ಓದುಗ ಬಳಗದವರು ಸನ್ಮಾನಿಸಿ, ಗೌರವಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕಾರ್ಯಕ್ರಮದ ಸಂಯೋಜಕರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಚೈತ್ರಾ ಮೋಹನ ನಾಗಮ್ಮನವರ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಾರ್ತಾಂಡಪ್ಪ ಕತ್ತಿ ನಿರೂಪಿಸಿದರು. ಉಪಾಧ್ಯಕ್ಷ ನಿಂಗಣ್ಣ ಕುಂಟಿ(ಇಟಗಿ) ವಂದಿಸಿದರು.

ಕಾರ್ಯಕ್ರಮದಲ್ಲಿ ಡಾ. ಪಂಚಾಕ್ಷರಿ ಹಿರೇಮಠ ಸಂಘದ ಗೌರವ ಉಪಾಧ್ಯಕ್ಷರಾದ ಡಾ. ಶಾಂತಿನಾಥ ದಿಬ್ಬದ, ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ, ಡಾ. ಡಿ.ಎಂ. ಹಿರೇಮಠ, ಬಸವರಾಜ ಹೂಗಾರ, ಎಸ್.ಕೆ. ಜೋಶಿ, ಪ್ರಭು ಹಂಚಿನಾಳ, ಚನಬಸಪ್ಪ ಅವರಾದಿ ಸೇರಿದಂತೆ ದೇಸಾಯಿಯವರ ಅಭಿಮಾನಿಗಳು, ಪರಿವಾರದವರು ಭಾಗವಹಿಸಿದ್ದರು.

**ಚೈತ್ರಾ ಮೋಹನ ನಾಗಮ್ಮನವರ**
ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ
ಸಂಯೋಜಕರು ಏಪ್ರಿಲ್ ತಿಂಗಳ ದತ್ತಿ
ಕಾರ್ಯಕ್ರಮ
ಮೊ : ೯೭೩೯೫–೯೧೧೩೭